ದಿನಾಂಕ : 15 ನೇ ಮೇ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರಿದ ಮುಖ್ಯ ವಿಚಾರಣೆ</u>: ಮಾನ್ಯ ಸ ಸ ಅ ರವರಿಂದ.

ಆರೋಪಿ 1 ರವರ ಮನೆಯಲ್ಲಿ ಎರಡು ಪಿಸ್ತೂಲ್ ನ ಬುಲೆಟ್ ಗಳನ್ನು ಅಮಾನತ್ತುಪಡಿಸಿರುತ್ತೇನೆ. ಸದರಿ ಬುಲೆಟ್ ಗಳನ್ನು ಮು ಮಾ 11 ಮತ್ತು 12 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ</u>.

ನಾವು ಸ್ಥಳಕ್ಕೆ ಹೋಗಿ ನೋಡಿದಾಗ ಹುಲಿಯ ಸಾವು ಅಸಹಜ ಎಂದು ಕಂಡು ಬಂದಿರುತ್ತದೆ. ತನಿಖೆ ಮಾಡುವ ಮೊದಲು ಪ್ರಕರಣ ದಾಖಲಿಸಿ ಆನಂತರ ತನಿಖೆ ಮಾಡಬೇಕು ಎಂದರೆ ನಾವು ದೂರು ದಾಖಲಿಸಿ ತನಿಖೆ ಮಾಡುತ್ತೇವೆ ಎನ್ನುತ್ತಾರೆ. ಹುಲಿ ಮೃತವಾಗಿರುವುದು ಕಂಡು ಬಂದ ತಕ್ಷಣ ನಾವು ಸ್ಥಳವನ್ನು ಪರಿಶೀಲಿಸಿರುತ್ತೇವೆ ಅದು ಸಹ ನಮ್ಮ ತನಿಖೆಯ ಭಾಗ ಎಂದರೆ ಸರಿ. ಅದೇ ದಿನ ಪ್ರಕರಣ ದಾಖಲಿಸಲು ತೊಂದರೆ ಇರಲಿಲ್ಲ. ದಿನಾಂಕ 26.08.2020 ರಂದು ಸ್ಥಳಕ್ಕೆ ಶ್ವಾನದಳ ಕರೆಸುವ ಮುಂಚೆ ಪ್ರಕರಣ ದಾಖಲಿಸಲು ತೊಂದರೆ ಇರಲಿಲ್ಲ. ಆರೋಪಿಯನ್ನು ದಸ್ತಗಿರಿ ಮಾಡುವ ಮೊದಲು ಪ್ರಕರಣ ದಾಖಲಿಸಲು ತೊಂದರೆ ಇರಲಿಲ್ಲ.

ಆರೋಪಿ 1 ರವರ ಮನೆಯ ಪಕ್ಕ ಚಂದ್ರ, ರಾಜರವರ ಮನೆ ಇದೆ ಎಂದರೆ ಸರಿ. 100 ಮೀ ಅಂತರದಲ್ಲಿ ತಟ್ಟೇಕೆರೆ ಕಾಲೋನಿ ಇದ್ದು ಅಲ್ಲಿ ಸುಮಾರು 2000 ಜನರು ಇದ್ದಾರೆ ಎಂದರೆ ಸರಿ. ಚಕ್ಕೇರ ಸೂರಿರವರು ಆರೋಪಿ ಮನೆಯಿಂದ ಸುಮಾರು 6-7 ಕಿ.ಮೀ ದೂರದಲ್ಲಿ ಇದ್ದಾರೆ ಎಂದರೆ ಸರಿಯಲ್ಲ, 3-4 ಕಿ.ಮೀ ದೂರದಲ್ಲಿ ಇದ್ದಾರೆ ಎನ್ನುತ್ತಾರೆ. ಆರೋಪಿ 1 ರವರು ಅಕ್ಕಪಕ್ಕದ ಮನೆಯವರನ್ನು ಮಹಜರ್ ಗೆ ಕರೆದೆವು ಆದರೆ ಅವರು ಒಪ್ಪಿ ರುವುದಿಲ್ಲ. ಆ ರೀತಿ ನೆರೆಯವರು ಒಪ್ಪಲಿಲ್ಲ ಎಂಬ ವಿಚಾರವನ್ನು ನನ್ನ ಹೇಳಿಕೆ ಹಾಗೂ ಮಹಜರ್ ನಲ್ಲಿ ಹೇಳಿಲ್ಲ ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿ. ಚಕ್ಕೇರ ಸೂರಿರವರು ಸ್ಥಳೀಯ ರಾಜಕಾರಣಿ ಎಂದರೆ ಸರಿ. ಚಕ್ಕೇರ ಸೂರಿರವರು ಅರಣ್ಯ ಇಲಾಖೆಯವರ ಪ್ರಕರಣಗಳಲ್ಲಿ ಹಲವು ಬಾರಿ ಸಾಕ್ಷ್ಯ ನುಡಿದಿದ್ದಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಚಕ್ಕೇರ ಸೂರಿರವರನ್ನು ಯಾರು

ಕರೆಸಿದರು ಎಂದು ನನಗೆ ಗೊತ್ತಿಲ್ಲ.

ಆರೋಪಿ 1 ರವರನ್ನು ದಸ್ತಗಿರಿ ನಂತರ ಕಲ್ಲಹಳ್ಳ ಕಛೇರಿಗೆ ಕಳುಹಿಸಿರುತ್ತೇನೆ. ನಾನು ಸ್ಥಳದಲ್ಲೆ ಇದ್ದೆ ಆರೋಪಿಯನ್ನು ಎಲ್ಲಿಗೆ ಕರೆದುಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ. ದೂರನ್ನು ನಾನೆ ತಯಾರಿಸಿದ್ದೇನೆ ಎಂದರೆ ಸರಿ. ಆರೋಪಿ 1 ರವರನ್ನು ದಸ್ತಗಿರಿ ಮಾಡಿದ ನಂತರ ಹೆಚ್ಚಿನ ತನಿಖೆಗೆ ನನ್ನ ಮೇಲಾಧಿಕಾರಿಗಳ ಮುಂದೆ ಹಾಜರುಪಡಿಸಿರುತ್ತಾರೆ. ಆರೋಪಿ 1 ತನ್ನ ಸ್ವ ಇಚ್ಛೆ ಹೇಳಿಕೆಯಲ್ಲಿ ಆರೋಪಿ 2 ರಿಂದ 4 ರವರ ಹೆಸರನ್ನು ನನ್ನ ಮೇಲಾಧಿಕಾರಿ ಮುಂದೆ ತಿಳಿಸಿರುತ್ತಾರೆ. ನಾನು ಈ ಪ್ರಕರಣದಲ್ಲಿ ಭಾಗಶಃ ತನಿಖೆ ಮಾಡಿರುತ್ತೇನೆ. ದೂರುದಾರರಾಗಿರುವ ಕಾರಣ ತನಿಖೆ ಮಾಡಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿ 1 ರವರು ಎಲ್ಲಿಯೂ ಸಹ ಆರೋಪಿ 2 ರಿಂದ 4 ರವರ ಹೆಸರನ್ನು ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಚಕ್ಕೇರ ಸೂರಿರವರ ಮಾತು ಕೇಳಿ ಆರೋಪಿ 2 ರಿಂದ 4 ರವರ ಹೆಸರನ್ನು ಸೇರಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ಅಮಾನತ್ತುಪಡಿಸಿದೆ ಎಂದು ಹೇಳುವ ಎರಡು ಕಾಡತೂಸುಗಳನ್ನು ಈಗ ಹಾಜರುಪಡಿಸಿಲ್ಲ. ಜಿಂಕೆ ಮಾಂಸ ಕೆಂಪು ಬಣ್ಣದಲ್ಲಿ ಇರುತ್ತದೆ. ಆ ಅಂದಾಜಿನ ಮೇಲೆ ನಾವು ಜಿಂಕೆ ಮಾಂಸ ಎಂದು ಪರಿಗಣಿಸಿದೆವು. ಎಲ್ಲಾ 4 ಕಾಲುಗಳ ಸಾಕುಪ್ರಾಣಿಗಳ ಮಾಂಸ ಕೆಂಪು ಬಣ್ಣದಲ್ಲಿ ಇರುತ್ತದೆ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಹೇಳಿದಂತೆ ಆರೋಪಿ 1 ರವರ ಮನೆಯಿಂದ ಯಾವುದೆ ಹಸಿ ಅಥವಾ ಬೇಯಿಸಿದ ಮಾಂಸ ಅಮಾನತ್ತುಪಡಿಸಿಲ್ಲ ಎಂದರೆ ಸರಿಯಲ್ಲ. ಜಿಂಕೆ ಮಾಂಸವನ್ನು ಆರೋಪಿ 1 ಎಲ್ಲಿಂದ ತಂದರು ಎಂದು ಕೇಳಿದಾಗ ಆರೋಪಿ ಹುಲಿ ಹೊಡೆದ ಸ್ಥಳದಿಂದ ತಂದೆವು ಎನ್ನುತ್ತಾರೆ. ಜಿಂಕೆ ಎಲ್ಲಿ ಮೃತವಾಗಿತ್ತು ಎಂಬ ಬಗ್ಗೆ ಮಹಜರ್ ಮಾಡಿಲ್ಲ ಎಂದರೆ ಸರಿ. ಆರೋಪಿತರು ಎಲ್ಲೂ ಸಹ ತಾವು ಜಿಂಕೆಯನ್ನು ಸಾಯಿಸಿದ ಬಗ್ಗೆ ಹೇಳಿಲ್ಲ ನಾನು ಸುಳ್ಳು ವರದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ಹೇಳಿರುವಂತೆ ಕೆಂದಳಿಲನ್ನು ಎಲ್ಲಿ ಸಾಯಿಸಿದರು ಎಲ್ಲಿಂದ ತಂದರು ಎಂಬ ಬಗ್ಗೆ ಮಹಜರ್ ಮಾಡಿಲ್ಲ ಎಂದರೆ ಸರಿ.

ಆರೋಪಿ 2 ಮತ್ತು 3 ರವರನ್ನು ಶನಿವಾರಸಂತೆಯಿಂದ ದಸ್ತಗಿರಿ ಮಾಡಿ ಕರೆತಂದಿರುತ್ತಾರೆ ಎಂಬ ಬಗ್ಗೆ ಮಾಹಿತಿ ಇರುತ್ತದೆ. ದಿನಾಂಕ 25.08.2020 ರಂದು ನಾವು ಸ್ಥಳಕ್ಕೆ ಹೋದಾಗ ಹುಲಿಯ ದೇಹ ಕೊಳೆತ ಸ್ಥಿತಿಯಲ್ಲಿ ಇತ್ತು ಹಾಗೂ ಬಾಯಿಯಲ್ಲಿ ಮತ್ತು ಕಿವಿಯಲ್ಲಿ ಹುಳ ಬರುತ್ತಿತ್ತು ಎಂದರೆ ಸರಿ. ಸಾಮಾನ್ಯವಾಗಿ ಅರಣ್ಯದಲ್ಲಿ ಪ್ರಾಣಿಗಳು ಸತ್ತು ಕೊಳೆತು ಹುಳ ಬರಲು ಅಂದಾಜು 3-4 ದಿನ ಸಮಯ ಬೇಕಾಗುತ್ತದೆ ಎನ್ನುತ್ತಾರೆ. ಎಫ್ ಎಸ್ ಎಲ ವರದಿಯಲ್ಲಿ ಹುಲಿಯ ಸಾವಿಗೆ ನಿಖರ

ಕಾರಣ ಕಂಡುಬಂದಿಲ್ಲ ಎಂದರೆ ಸರಿಯಲ್ಲ, ಹುಲಿಯ ದೇಹದಲ್ಲಿ ಗುಂಡು ಸಿಕ್ಕಿರುತ್ತದೆ ಎನ್ನುತ್ತಾರೆ. ನಾನು ಎಫ್ ಎಸ್ ಎಲ್ ವರದಿಯನ್ನು ಓದಿರುವುದಿಲ್ಲ ಎನ್ನುತ್ತಾರೆ. ಸದರಿ ಹುಲಿ ವಯಸ್ಸಾಗಿ ಖಾಯಿಲೆಯಿಂದ ಮೃತವಾಗಿದೆ ಎಂದರೆ ಸರಿಯಲ್ಲ. ಆರೋಪಿತರಿಗೂ ಹುಲಿಯ ಸಾವಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು 11 ಹಾಗೂ 12 ಬುಲೆಟ್ ಗಳಲ್ಲ 0.22 ರೈಫಲ್ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಆ ರೀತಿ ರೈಫಲ್ ನಾವು ಬಳಸುವುದಿಲ್ಲ ಎನ್ನುತ್ತಾರೆ. ರೈಫಲ್ ಬೇರೆ ಪಿಸ್ತೂಲು ಬೇರೆ ಎಂದರೆ ಸರಿ. ಮುದ್ದೆಮಾಲು 11 ಹಾಗೂ 12 ನ್ನು ಆರೋಪಿ 1 ರವರ ಮನೆಯಿಂದ ಅಮಾನತ್ತುಪಡಿಸಿಲ್ಲ ಎಂದರೆ ಸರಿಯಲ್ಲ. ಚಿಲ್ಸ್ ಗಳನ್ನು ಸೈಕಲ್ ಬಾಲ್ ಗಳಲಾಗಿ ಸೈಕಲ್ ಅಂಗಡಿಯಿಂದ ತಂದಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಅಮಾನತ್ತುಪಡಿಸಿರುವ ಚಿಲ್ಸ್ ರೀತಿಯ ಚಿಲ್ಸ್ ಗಳನ್ನು ನಾನು ಈ ಹಿಂದೆ ಯಾವತ್ತೂ ವಶಪಡಿಸಿಕೊಂಡಿರುವುದಿಲ್ಲ ಎನ್ನುತ್ತಾರೆ. ಈ ಪ್ರಕರಣದ ಚಿಲ್ಸ್ ಗಳು ಸೀಸದಿಂದ ಮಾಡಿರುವ ಚಿಲ್ಸ್ ಗಳಲ್ಲ ಕಬ್ಬಿಣದ ಚಿಲ್ಸ್ ಗಳು ಎಂದರೆ ನಾನು ಅದರಲ್ಲಿ ಪರಿಣಿತ ಅಲ್ಲ ಎನ್ನುತ್ತಾರೆ. ನಾನು ಅವುಗಳನ್ನು ಅಮಾನತ್ತುಪಡಿಸಿದಾಗ ಅವುಗಳು ಚಿಲ್ಸ್ ಗಳು ಎಂದು ತಿಳಿಯಿತು ಎನ್ನುತ್ತಾರೆ. ಈ ರೀತಿ ಕಬ್ಬಿಣದ ಚಿಲ್ಸ್ ಗಳನ್ನು ರೈಫಲ್ ಗೆ ಬಳಸುವುದಿಲ್ಲ ಎಂದರೆ ಸರಿಯಲ್ಲ. ನನಗೆ ಈ ಬಗ್ಗೆ ಸರಿಯಾಗಿ ತಿಳಿದಿಲ್ಲದೇ ಇದ್ದರೂ ಕೋವಿಗೆ ಬಳಸುವ ಚಿಲ್ಸ್ ಎಂದು ಬರೆದಿದ್ದೇನೆ ಎಂದರೆ ನನಗೆ ಚಿಲ್ಸ್ ಗಳು ಎಂದು ತಿಳಿದಿದ್ದ ಕಾರಣ ಆ ರೀತಿ ಬರೆದಿದ್ದೇನೆ ಎನ್ನುತ್ತಾರೆ. ಚಿಲ್ಸ್ ಗಳನ್ನು ನಾನು ಎಫ್ ಎಸ್ ಎಲ್ ಗೆ ಕಳುಹಿಸಿರುವುದಿಲ್ಲ ಎನ್ನುತ್ತಾರೆ.

ಹುಲಿ ಮೃತವಾಗಿದ್ದ ಸ್ಥಳದಲ್ಲಿ ನನಗೆ ಯಾವುದೇ ಅನುಮಾನಾಸ್ಪದ ವಸ್ತುಗಳು ದೊರೆತಿರುವುದಿಲ್ಲ. ನಾನು ಆರೋಪಿ 1 ರವರ ಮನೆಯಲ್ಲಿ ವಸ್ತುಗಳನ್ನು ಅಮಾನತ್ತುಪಡಿಸುವ ಮೊದಲೇ ಆರೋಪಿಯನ್ನು ದಸ್ತಗಿರಿ ಮಾಡಿ ಕಛೇರಿಗೆ ಕಳುಹಿಸಿದ್ದೆ ಎಂದರೆ ಸರಿಯಲ್ಲ, ಅಮಾನತ್ತುಪಡಿಸಿದ ನಂತರ ಆರೋಪಿಯೊಂದಿಗೆ ಕಛೇರಿಗೆ ಹೋಗಿರುತ್ತೇನೆ ಎನ್ನುತ್ತಾರೆ. ನಾನು ಹೇಳಿದಂತೆ ಯಾವುದೇ ಮಹಜರ್ ಮಾಡಿಲ್ಲ ಹಾಗೂ ಮುದ್ದೆಮಾಲುಗಳನ್ನು ಅಮಾನತ್ತುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ 1 ಅನ್ನು ನನ್ನ ಇಚ್ಛೆಯಂತೆ ಆರೋಪಿತರ ವಿರುದ್ಧ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ 1 ರವರ ಮನೆಯಲ್ಲಿ ಮಹಜರ್ ಮಾಡಿಲ್ಲ ನಮ್ಮ ಕಛೇರಿಯಲ್ಲಿ ಮಹಜರ್ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಆದ ಕಾರಣ ಸ್ಥಳೀಯರ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ 3 ಫೋಟೋ ಬೇರೆ ಎಲ್ಲೋ ತೆಗೆದಿದ್ದೇನೆ ಎಂದರೆ ಸರಿಯಲ್ಲ. ನಿಪಿ 3 ರಲ್ಲಿ ಕಾಣುವ ಮನೆ ಆರೋಪಿಗೆ ಸೇರಿದ್ದು ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ 3

ಅನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಛೇರಿಯ ಮುಂದೆ ಆರೋಪಿಯನ್ನು ಕೂರಿಸಿ ಫೋಟೋ ತೆಗೆದಿದ್ದೇವೆ ಎಂದರೆ ಸರಿಯಲ್ಲ. ನಿಪಿ 4 ರಲ್ಲಿ ಆರೋಪಿ ಕಾಣುವ ಫೋಟೋವನ್ನು ನಮ್ಮ ಕಛೇರಿ ಬಳಿ ತೆಗೆದಿದ್ದೇನೆ ಎನ್ನುತ್ತಾರೆ. ಜಿಂಕೆ ಮಾಂಸವನ್ನು ಅಮಾನತ್ತುಪಡಿಸಿ ಆರೋಪಿ ಮನೆಯಿಂದ ತೆಗೆದುಕೊಂಡು ಹೋದೆವು. ಇಲಾಖಾ ವೈದ್ಯರು ಸದರಿ ಮಾಂಸವನ್ನು ಪರಿಶೀಲಿಸಿ ಸದರಿ ಮಾಂಸ ಜಿಂಕೆ ಮಾಂಸ ಎಂದು ವರದಿ ನೀಡಿದ್ದಾರೆ. ವೈದ್ಯರು ನಿಪಿ 5 ರಂತೆ ಯಾವುದೆ ವರದಿ ನೀಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 5 ಅನ್ನು ನಾನು ಕಛೇರಿಯಲ್ಲಿ ನನ್ನ ಇಚ್ಛೆಯಂತೆ ಸುಳ್ಳು ವರದಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ 2 ರವರ ಮನೆಯಲ್ಲಿ ಮಹಜರ್ ಮಾಡಿರುವುದಿಲ್ಲ, ನಿಪಿ 6 ಅನ್ನು ನಾನು ಕಛೇರಿಯಲ್ಲಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ 7 ಫೋಟೋವನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲುಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಪ್ರಾಣಿ ಮೃತಗೊಂಡು ಕೊಳೆತ ಸ್ಥಿತಿಯಲ್ಲಿದ್ದರೆ ಸುತ್ತಮುತ್ತಲ ಪ್ರದೇಶದಲ್ಲಿ ಶ್ವಾನದಳ ಶ್ವಾನ ಕೃತ್ಯಕ್ಕೆ ಸಂಬಂಧಿಸಿದ ಇತರೆ ವಾಸನೆ ಕಂಡು ಹಿಡಿಯಲು ಸಾಧ್ಯವಿಲ್ಲ ಎಂದರೆ ನನಗೆ ಆ ಬಗ್ಗೆ ಜ್ಞಾನ ಇಲ್ಲ ಆದರೆ ಆ ದಿನ ಶ್ವಾನ ಆರೋಪಿ ಮನೆಗೆ ನಮ್ಮನ್ನು ಕರೆದುಕೊಂಡು ಹೋಗಿರುತ್ತದೆ ಎನ್ನುತ್ತಾರೆ. ನಾನು ಹೇಳಿದಂತೆ ಆ ದಿನ ಶ್ವಾನ ಆರೋಪಿ ಮನೆಯನ್ನು ತೋರಿಸಿರುವುದಿಲ್ಲ, ನಾವು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ 1 ರವರಿಂದ ಯಾವುದೇ ವಸ್ತು ಅಮಾನತ್ತುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಸ್ಥಳ ಮತ್ತು ದಿನಾಂಕ ನಮೂದಿಸಿಲ್ಲ ಎಂದರೆ ಮರೆತಿದ್ದೇನೆ ಎನ್ನುತ್ತಾರೆ. ನಾನು ಉದ್ದೇಶಪೂರ್ವಕವಾಗಿ ಸ್ಥಳ ಮತ್ತು ದಿನಾಂಕ ನಮೂದಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಂದ ಹುಲಿಯ ಹುಲ್ಲುಗಳು, ಉಗುರುಗಳನ್ನು, ಕೆಂದಳಿಲಿನ ಕೂದಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಎಲ್ಲಿಯೊ ಮೃತಹೊಂದಿದ್ದ ಹುಲಿಯಿಂದ ಸಂಗ್ರಹಿಸಿದ್ದ ಹುಲ್ಲುಗಳು, ಉಗುರುಗಳನ್ನು ಈ ಪ್ರಕರಣಕ್ಕಾಗಿ ಸೇರಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿ 2 ರಿಂದ 4 ನಮ್ಮನ್ನು ಹುಲಿ ಮೃತ ಹೊಂದಿದ್ದ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಹಾಗೂ ಸ್ಥಳ ತೋರಿಸಿಲ್ಲ ಎಂದರೆ ಸರಿಯಲ್ಲ. ಸಿಡಿ ಯನ್ನು ನಾವೇ ಬಲವಂತವಾಗಿ ಆರೋಪಿತರನ್ನು ಕರೆದುಕೊಂಡು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ಆರೋಪಿ 5 ನನಗೆ ಯಾವುದೇ ಮಾಹಿತಿ ನೀಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ದಿನಾಂಕ 03.09.2020 ರಂದು ಆರೋಪಿ 5 ರವರ ಮನೆಗೆ ಹೋಗಿರುತ್ತೇನೆ. ಇತರೆ ಆರೋಪಿತರು ದಸ್ತಗಿರಿ ಆಗಿರುವ ಬಗ್ಗೆ

ಆರೋಪಿ 5 ರವರಿಗೆ ಮಾಹಿತಿ ಇತ್ತೊ ಇಲ್ಲವೊ ನನಗೆ ಗೊತ್ತಿಲ್ಲ. ಚಾ ಸಾ 13 ಹಾಗೂ 14 Coorg Wild Life ನ NGO ಸದಸ್ಯರು. ಚಾಸಾ 13 ಮತ್ತು 14 ನಮ್ಮ ಇಲಾಖೆಗೆ ಸಹಾಯ ಮಾಡುವ ವ್ಯಕ್ತಿಗಳು, ನಾವು ಹೇಳಿದಂತೆ ಕೇಳುವವರು ಎಂದರೆ ಸರಿಯಲ್ಲ. ಚಾಸಾ 13 ಮತ್ತು 14 ಹಲವು ಪ್ರಕರಣಗಳಲ್ಲಿ ಸಾಕ್ಷಿ ನುಡಿದಿರುತ್ತಾರೆ ಎಂದರೆ ಯಾವ ಪ್ರಕರಣದಲ್ಲಿ ಸಾಕ್ಷಿದಾರರಾಗಿದ್ದಾರೆ ಅದರಂತೆ ಸಾಕ್ಷಿ ನುಡಿಯುತ್ತಾರೆ ಎನ್ನುತ್ತಾರೆ.

ಚಾ ಸಾ 5 ಬಾಳೆಲೆಯವರು. ಬಾಳೆಲೆ ಹಾಗೂ ಸುಳುಗೋಡಿಗೆ 3-4 ಕಿ.ಮಿ ಅಂತರ ಇರಬಹುದು. ಸುಳುಗೋಡು ಗ್ರಾಮದವರನ್ನು ಮಹಜರ್ ಗೆ ಸಾಕ್ಷಿದಾರರಾಗಿ ಕರೆದೆವು ಆದರೆ ಅವರು ಬಂದಿರುವುದಿಲ್ಲ ಎನ್ನುತ್ತಾರೆ. ಸದರಿ ವಿಚಾರವನ್ನು ಮಹಜರ್ ನಲ್ಲಿ ನಮೂದಿಸಿಲ್ಲ ಎಂದರೆ ಸರಿ. ಚಾ ಸಾ 13 ಹಾಗೂ 14 ರವರು ಡ್ಯಾಕುಮೆಂಟರಿ ಚಿತ್ರೀಕರಣ ಮಾಡಲು ನಮ್ಮ ಅರಣ್ಯಕ್ಕೆ ಬರುತ್ತಾರೆ ಎಂದರೆ ನಮ್ಮ ವ್ಯಾಪ್ತಿಯ ಅರಣ್ಯಕ್ಕೆ ಬಂದಿರುವುದಿಲ್ಲ ಎನ್ನುತ್ತಾರೆ. ದಿನಾಂಕ 04.09.2020 ರಂದು ನಾನು ಯಾವುದೇ ಛಾಯಾಚಿತ್ರ ತೆಗೆದಿಲ್ಲ ಅವುಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ 1 ಮರು ಸ್ವ ಇಚ್ಛೇ ಹೇಳಿಕೆ ನೀಡಿಲ್ಲ ನಾವೇ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ 2 ಜೀವಂತ ಕಾಡುತೂಸುಗಳನ್ನು ಹಾಜರುಪಡಿಸಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕಾಡುತೂಸುಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಮ್ಮ ಇಲಾಖೆಯವರು ಪ್ರಚಾರಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.